ಹಲವು ಸುದ್ದಿಗಳಲ್ಲಿ ಇದೂ ಒಂದು. ಆನೆಯ ಬಗ್ಗೆ ಜಯಂತನಿಗಿದ್ದ ಪ್ರೀತಿಯನ್ನು ಬಲ್ಲವನಾಗಿದ್ದ ಬಸಪ್ಪ ಅದೇ ಸುದ್ದಿಯನ್ನು ಪ್ರಧಾನವಾಗಿ ಬಿತ್ತರಿಸಿದ್ದ. ಆಮೇಲೆ ಇತರ ಕೆಲವು ಸುದ್ದಿಗಳನ್ನು ಮನಬಂದಂತೆ ಉಲ್ಲೇಖಿಸಿದ. ಗೋಪಣ್ಣನ ಮಗ ಸತೀಶ ನಿನ್ನೆ ಬೊಂಬಾಯಿಯಿಂದ ಬಂದಿದ್ದಾನೆ. ಸುರೇಶ್ ಶೆಟ್ಟರು ಬೆಳ್ಮಣ್ಣು ಮಂಡಲ ಪೂಜೆಯ ಸೋಡ್ತಿಯಲ್ಲಿ ಒಂದು ಲಕ್ಷ ಜೂಜು ಗೆದ್ದರಂತೆ. ಸುದ್ದಿಗಳ ವಿವರ ಆಮೇಲೆ ಎಂದು ಸೂಚಿಸುವಂತೆ, 'ಹಂ!' ಎಂಬ ಹೂಂಕಾರದಿಂದ ತಾನಿನ್ನು ಕಾಯಕಕ್ಕೆ ಇಳಿದಾಯಿತು ಎಂದು ವರ್ತನೆಯಲ್ಲಿಯೇ ತಿಳಿಸುವಂತೆ, ತೆಂಗಿನ ಮರ ಹತ್ತಲು ಹಗ್ಗದ ಉರುಳನ್ನು ಹಿಡಿದುಕೊಂಡು ಮರಗಳತ್ತ ನಡೆದು, ತನ್ನ ತಜ್ಞ ದೃಷ್ಟಿಯನ್ನು ತೆಂಗಿನ ಗೊನೆಗಳತ್ತ ಬೀರಿ ಯಾವ ಗೊನೆಗಳು ಬಲಿತಿವೆ ಎನ್ನುವುದನ್ನು ಗಮನಿಸತೊಡಗಿದ.

ಜಯಂತನಿಗೆ ಆನೆಯ ಬಗ್ಗೆ ಮತ್ತಷ್ಟು ವಿವರಗಳು ಬೇಕಿದ್ದವು. ಆದರೆ ಇನ್ನೀಗ ಬಸಪ್ಪ ಕಾಯಕಕ್ಕೆ ಇಳಿದರೆ ಮಾತಾಡಲಾರ ಎಂದು ಗೊತ್ತಿದ್ದುದರಿಂದ ಜಯಂತ ಸುಮ್ಮನೆ ಬಾವಿಕಟ್ಟೆಯಲ್ಲಿದ್ದ ಬಟ್ಟೆ ಒಗೆಯುವ ಕಲ್ಲಿನ ಮೇಲೆ ಕುಳಿತು ಬಸಪ್ಪನತ್ತ ನೋಡತೊಡಗಿದ. ಆದರೆ ಅವನಿಗೆ ಬಸಪ್ಪನಿಗಿಂತಲೂ ಅವನ ಆಚೆಗಿನ ಶೂನ್ಯವೇ ಕಾಣಿಸುತ್ತಿತ್ತು.

ಜಯಂತನ ಮನಸ್ಸು ಹೆಂಡತಿ ರತ್ನಾವತಿಯತ್ತ ಹೋಯಿತು. ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದರೂ ಹೆಂಡತಿ ರತ್ನಾವತಿ ಆರೇ ತಿಂಗಳಲ್ಲಿ ಅವನನ್ನು ಬಿಟ್ಟುಹೋಗಿ ತವರುಮನೆ ಸೇರಿದ್ದಾಳೆ. ಅವಳು ಬಂದಾಳು ಎನ್ನುವ ನಿರೀಕ್ಷೆ ಅವನಿಗೆ ಇನ್ನೂ ಇದೆ. ಅದಕ್ಕಾಗಿ ಅವನು ಅವಳ ತಂದೆ ತಾಯಿಯ ಮೇಲೆ ಆಗಾಗ ಒತ್ತಡ ಹಾಕುತ್ತಲೇ ಇರುತ್ತಾನೆ. ಆದರೆ ಅವರು ರತ್ನಾವತಿಗೆ ಏನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲವೆಂದು ಅವನಿಗೆ ಅನಿಸುತ್ತಿತ್ತು. ಆದರೆ ರತ್ನಾವತಿ ಆರ್ಕೆಸ್ಟ್ರಾ ಗಾಯಕ ಮೋಹನನ ಜತೆಗೆ ಈಗ ಹೆಚ್ಚು ಹೆಚ್ಚು ತಿರುಗುತ್ತಿದ್ದಾಳೆ ಎನ್ನುವ ಸುದ್ದಿಯೂ ಅವನ ಕಿವಿಗೆ ತಲುಪಿ ಅವನನ್ನು ಹತಾಶಗೊಳಿಸಿದೆ. ಮದುವೆಗೆ ಮುಂಚಿನಿಂದಲೂ ರತ್ನಾವತಿ ಅವನ ಜತೆಗೆ ಆರ್ಕೆಸ್ಟ್ರಾಗಳಲ್ಲಿ ಹಾಡಲು ಹೋಗುತ್ತಿದ್ದಳಂತೆ.

ಆನೆಯ ಅಪಘಾತಕ್ಕೂ ಹೆಂಡತಿ ರತ್ನಾವತಿಗೂ ಒಂದು ಅವ್ಯಕ್ತ ಸಂಬಂಧವನ್ನು ಕಲ್ಪಿಸಿದ ಜಯಂತನ ಮನಸ್ಸು ದುಗುಡಕ್ಕೆ ಒಳಗಾಯಿತು. ಹಾಗೆ ನೆನಪಾದುದರ ಕಾರಣವಾದರೂ ವಿಚಿತ್ರವಾಗಿತ್ತು.

ಒಂದು ದಿನ, ಜಯಂತ ತಾನು ಕ್ಲಾರ್ಕ್ ಆಗಿದ್ದ ಸ್ಥಳೀಯ ಸೊಸೈಟಿಯಲ್ಲಿ ಡ್ಯೂಟಿಯಲ್ಲಿದ್ದ ಹೊತ್ತಿನಲ್ಲಿ, ಗಂಡನನ್ನು ಬಿಟ್ಟುಹೋಗಿದ್ದ ರತ್ನಾವತಿ ತನ್ನ ಗೆಳೆಯ ಮೋಹನನ ಜತೆಗೆ ಅವನ ಬೈಕಿನಲ್ಲಿ ಮಂಚದಬೈಲಿನ ಮನೆಗೆ ಬಂದಿದ್ದಳು. ಆಗ ಕಪ್ಪೆ ಹಿಡಿಯುವ ಬಸಪ್ಪ ಕೊಯ್ದ ತೆಂಗಿನಕಾಯಿಗಳನ್ನು ಆರಿಸಿ ಮನೆಯ ಹೊರಗಿನ ಕೊಟ್ಟಿಗೆಯಲ್ಲಿ ರಾಶಿಹಾಕುತ್ತಾ ಇದ್ದ. ಅವನು ನಂಬಿಕಸ್ಥನಾದುದರಿಂದ ಜಯಂತ ಅವನನ್ನೊಬ್ಬನನ್ನೇ ಕೆಲಸ ಮಾಡಲು ಬಿಟ್ಟು ತಾನು ಡ್ಯೂಟಿಗೆ ಹೋಗುತ್ತಿದ್ದುದು ಅಪರೂಪವೇನೂ ಅಲ್ಲ. ಮನೆಯಲ್ಲಿ ಒಂಟಿಯಾಗಿ ಬದುಕುವವನು ಜನರನ್ನು ನಂಬದಿದ್ದರೆ ಜೀವನ ಸಾಗಿಸುವುದು ಕಷ್ಟವಲ್ಲವೇ? ಅದೂ ಒಂದು ಸಣ್ಣ ತೋಟವನ್ನೂ ಹೊಂದಿದ್ದವನು? ತನ್ನ ತೋಟವನ್ನು ತಾನು ನೋಡಿಕೊಳ್ಳಲು ಸಾಧ್ಯವಿಲ್ಲದಾಗ ಇಂತಹ ವ್ಯವಸ್ಥೆಗಳು ಅನಿವಾರ್ಯವಾಗುತ್ತವೆ.

ಸುಮಾರು ಹತ್ತೂವರೆಯ ಹೊತ್ತಿಗೆ ಮೋಹನನ ಬೈಕಿನ ಹಿಂದಿನ ಸೀಟಿನಲ್ಲಿ ಕುಳಿತು ತೇಲಿಕೊಂಡು ಬಂದ ರತ್ನಾವತಿ ನೆಟ್ಟಗೆ ಕೊಟ್ಟಿಗೆಗೆ ಹೋಗಿ, ಜಯಂತ ರಹಸ್ಯ ಸ್ಥಳದಲ್ಲಿ ಇರಿಸುತ್ತಿದ್ದ ಬೀಗದಕೈಯನ್ನು ತೆಗೆದುಕೊಂಡು ಮನೆಯ ಒಳಗೆ ಮೋಹನನನ್ನೂ ಕರೆದುಕೊಂಡು ಹೋಗಿದ್ದಳು.

ತೆಂಗಿನಕಾಯಿ ಒಟ್ಟುತ್ತಿದ್ದ ಕಪ್ಪೆ ಹಿಡಿಯುವ ಬಸಪ್ಪನನ್ನು ಕಂಡು ಅವಳು ವಿಚಲಿತಳಾಗದೆ, 'ಏನೋ ಬಸಪ್ಪ? ನಿನ್ನ ಹೆಂಡತಿ ಹಿಂದೆ ಬಂದಳೇನೋ?' ಎಂದು ಮಾತಾಡಿಸಿ ಅವನ ಉತ್ತರವನ್ನು ಕೇಳಿಸಿಕೊಳ್ಳಲು ನಿಲ್ಲದೆ ಮನೆಯೊಳಗೆ ಹೋಗಿದ್ದಳು. ಅವಳು ಅವನನ್ನು ಮಾತಾಡಿಸಿದ ರೀತಿ, 'ನಿನ್ನ ಉಪಸ್ಥಿತಿಯಿಂದ ನಮಗೇನೂ ಅಡ್ಡಿಯಲ್ಲ, ನಾನೀ ಮನೆಯ ಯಜಮಾನ್ತಿ' ಎನ್ನುವುದನ್ನು ಸೂಚಿಸುವಂತಿತ್ತು.

ಆಮೇಲೆ ಬಸಪ್ಪನಿಂದ ಈ ವಿಚಾರವನ್ನು ತಿಳಿದಾಗ ಜಯಂತ ಬಹಳ ಮಾನಸಿಕ ವೇದನೆಯನ್ನು ಅನುಭವಿಸಿದ. ಈ ವಿಚಾರ ತಿಳಿದ ಮೇಲೆ